CLAUSES 2 TO 4

MR. SPEAKER.—The question is.

"That Clauses 2 to 4, both inclusive, do stand part of the Bill."

The Motion was adopted

Clauses 2 to 4, inclusive, were added to the Bill.

CLAUSE 1 Etc.

MR. SPEAKER.—The question is

"That Clause 1, the Long Title, the Preamble and the Enacting formula do stand part of the Bill."

Tte Motion was adopted

Clause 1, the Long Title, the Preamble and the enacting formula were added to the Bill.

Motion to Pass

SRI MALLIKARJUNA M. KHARGE.—Sir, I beg to move.

"That the Karnataka Bhoodan Yagna (Repeal) Bill, 1982 be passed."

MR. SPEAKER,—The question is.

"That the Karnataka Bhoodan Yagna (Repeal) Bill, 1982 be passed."

The Motion was adopted and the Bill was passed.

ಶ್ರೀ ಎಚ್. ಗಂಗಾಧರನ್,—ಹೈವೇಸ್ ಬಿಲ್ ಬಗ್ಗೆ ಸ್ವಲ್ಪ ಚರ್ಚೆಯಾಗಬೇಕಾಗಿದೆ. ಅದನ್ನು ನಾಳೆ ತೆಗೆದುಕೊಳ್ಳಿ, ಪಾರ್ಕ್‌ಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಮುಗಿಸಿಬಿಡೋಣ.

THE KARNATAKA GOVERNMENT PARKS (PRESERVATION) (AMENDMENT) BILL, 198 .

Motion to Consider

SRI Y. RAMAKRISHNA (Minister for Law and Parliamentary Affairs).—Sir, on behalf of the Minister of State for Horticulture and Prisons, I beg to move.

"That the Karnataka Government Parks (Preservation) (Amendment) Bill, 1982 be taken into consideration."

The question was proposed.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಇದರ ಉದ್ದೇಶ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಡಿದವರ ನೆನಪಿಗಾಗಿ ವೀರಸೌಧ ಕಟ್ಟಬೇಕೆಂದು ಕಾನೂನು ಮಾಡಿದ್ದೆವು. ಇದಾದಮೇಲೆ ಸಾರ್ವಜನಿಕರಿಂದ ಲಾಲ್‌ಬಾಗ್ ಪಾರ್ಕ್‌ನಲ್ಲಿ ಕಟ್ಟಬಾರದೆಂಬ ಆಕ್ಷೇಪಣೆಗಳು ಬಂದ ದಸೆಯಿಂದ ಇವುಗಳನ್ನು ಗಣನೆಗೆ ತೆಗೆದುಕೊಂಡು ಅಲ್ಲಿ ಕಟ್ಟುವುದಕ್ಕೆ ಬೇಡ ಎನ್ನುವ ನಿರ್ಣಯಕ್ಕೆ ಸರ್ಕಾರ ಬಂದು ಈ ಮಸೂದೆಯ ಮೂಲಕ ತೆಗೆದುಕೊಂಡು ಬಂದಿದೆ, ಇದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ.

ಶ್ರೀ ಪಿ. ಎಲ್. ತಿಮ್ಮೇಗೌಡ.—ಬೇರೆ ಕಡೆ ಜಾಗ ಎಲ್ಲಿ ನೋಡಿದ್ದೀರಿ ? ಎಲ್ಲಿ ಕಟ್ಟಬೇಕೆಂದು ತೀರ್ಮಾನ ಮಾಡಿದ್ದೀರಿ, ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಪಿ. ರಾಂದೇವ್.—ಈ ಉದ್ದೇಶವೇ ಒಳ್ಳೆಯದಲ್ಲವೆಂದು ನನಗನ್ನಿಸುತ್ತದೆ. ವೀರಸೌಧ ವನ್ನು ಕಟ್ಟುವುದಕ್ಕೆ ಯಾರು ಆಬ್ಜೆಕ್ಷನ್ ಮಾಡಿದರು. ಲಾಲ್‌ಬಾಗ್‌ನಲ್ಲಿ ವೀರಸೌಧವನ್ನು ಯಾವ ರೀತಿ ಕಟ್ಟುತ್ತೀರಿ ಎನ್ನುವುದು ಮುಖ್ಯ. ನಾನು ನಮ್ಮ ದೇಶ ಮತ್ತು ಪರದೇಶಗಳಲ್ಲಿ ಹೋಗಿ ನೋಡಿದ್ದೇನೆ. ಆಯಾ ದೇಶಗಳಲ್ಲಿ ಅನೇಕರೀತಿಯ ಮಾನ್ಯುಮೆಂಟಲ್ಸ್‌ಗಳು ಇವೆ. ವೀರ ಸೌಧ ಹನುಮಂತಯ್ಯನವರ ಸೌಧ ಅಲ್ಲ. ಅದಕ್ಕೆ ಏತಕ್ಕೆ ವಿರೋಧ ಮಾಡುತ್ತಾರೋ ಗೊತ್ತಿಲ್ಲ. ಕಬ್ಬನ್ ಪಾರ್ಕಿನಲ್ಲಿ ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್ ಕಟ್ಟಿದ್ದೀರಿ, ಡಿ.ಪಿ.ಐ. ಆಫೀಸಿನಂತ ದೊಡ್ಡ ದೊಡ್ಡ ಕಟ್ಟಡಗಳು ಇವೆ. ಡೆಲ್ಲಿಯಲ್ಲಿ ಪಾರ್ಲಿಮೆಂಟ್ ಭವನದ ಮುಂದೆ ಇದೆ. ವ್ಯಕ್ತಿಗಳು ಇರುವಾಗ ಒಪ್ಪಿಗೆ ಕೊಟ್ಟು ಅವರು ಹೋದಾಗ ಅಳಿಸಿ ಹಾಕುವುದು ಸರಿಯಲ್ಲ. ದಿವಂಗತ ಹನುಮಂತಯ್ಯನವರು ಈ ರಾಜ್ಯವನ್ನು ಕಟ್ಟಿರತಕ್ಕಂಥ ಶಿಲ್ಪಿ. ಯಾರೋ ನಾಲ್ಕು ಜನ ವಿರೋಧ ಮಾಡಿದರೆಂದು ತಾವು ಹೇಳಿದರೆ. ಹನುಮಂತಯ್ಯನವರಿಗೆ ಅವಮಾನ ಮಾಡಿದಹಾಗೆ ಆಗುತ್ತದೆ. ಇದು ಸರಿಯಲ್ಲ, ವಾಪಸ್ಸು ತೆಗೆದುಕೊಳ್ಳಿ. ನಾನು ಅನೇಕ ದೇಶಗಳನ್ನು ಸುತ್ತಿದ್ದೇನೆ. ಯಾವ ದೇಶಕ್ಕೆ ಹೋದರೂ ಅಲ್ಲಿ ಕೆಲವೊಂದು ಸ್ಮಾರಕಗಳನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದಿರುವುದನ್ನು ನಾನು ನೋಡಬಹುದು. ಅದಕೋಸ್ಕರ ಲಾಲ್‌ಬಾಗ್‌ನಲ್ಲಿ ವೀರಸೌಧವನ್ನು ಕಟ್ಟುವುದು ತಪ್ಪಿಸಬೇಡಿ. ಇದರಿಂದ ಲಾಲ್ ಬಾಗಿಗೂ ಹೆಚ್ಚಿನ ಭೂಷಣ ಬರುತ್ತದೆ. ಕೆಂಪೇಗೌಡನ ಸ್ಮಾರಕ ಇದೆ. ಒಂದು ಪಕ್ಷ ಅಬ್ಜೆಕ್ಷನ್ ಬಂದಿದ್ದರೆ ಓವರ್ ರೂಲ್ ಮಾಡಿ, ಈ ಕೆಲಸ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ವಿಧಾನ ಸೌಧದ ಮುಂದೆ ಅಂಬೇಡ್ಕರ ಪ್ರತಿಮೆ ಹಾಕಿದ್ದೀರಿ, ಈಗ ಹನುಮಂತಯ್ಯನ ವರ ಮತ್ತು ದೇವರಾಜ್ ಅರಸು ಅವರ ಪ್ರತಿಮೆ ಹಾಕುತ್ತೇವೆಂದು ಹೇಳಿದ್ದೀರಿ, ಇದನ್ನು ನಾವು ಸ್ವಾಗತಿಸುತ್ತೇವೆ. ಆದುದರಿಂದ ದಿವಂಗತ ಹನುಮಂತಯ್ಯನವರಿಗೆ ಗೌರವ ಕೊಡುವ ದೃಷ್ಟಿಯಿಂದ ಲಾದರೂ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಒತ್ತಾಯ ಮಾಡಿ ಕೇಳಿ ಕೊಳ್ಳುತ್ತೇನೆ.

ಶ್ರೀ ಪೆಟ್. ಗಂಗಾಧರನ್.—ವೀರಸೌಧ ಕಟ್ಟುವುದಕ್ಕೆ ನಮ್ಮ ವಿರೋಧ ಇಲ್ಲ. ಇವತ್ತು ಬೆಂಗಳೂರು ನಗರದ ಜನಸಂಖ್ಯೆ ೩೦ ಲಕ್ಷಕ್ಕೆ ಏರಿದೆ. ಇವತ್ತು ಬೆಂಗಳೂರು ನಗರದಲ್ಲಿ ಉಸಿರಾಡುವುದಕ್ಕೆ ಅವಕಾಶ ಇಲ್ಲದಂತಾಗಿದೆ, ಇರತಕ್ಕ ದೊಡ್ಡ ದೊಡ್ಡ ಪಾರ್ಕುಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ಆಫೀಸುಗಳಿಗೆ ಕೊಡುತ್ತಿದ್ದಾರೆ. ಹಿಂದೆ ಬಿ.ಡಿ.ಎ. ಮತ್ತು ಸಿ.ಐ.ಟಿ.ಬಿ. ಮೂಲಕ ಉದ್ಯಾನವನ ಗಳಿಗಾಗಿ ಬಿಟ್ಟಿದ್ದಂತ ಬಾಗಗಳಲ್ಲಿ ಆಟದ ಮೈದಾನಗಳಿಗೆ ಬಿಟ್ಟಿದಂತ ಜಾಗಗಳಲ್ಲಿ ಬಿಲ್ಡಿಂಗಗಳಿಗೆ ಅವಕಾಶ ಕೊಟ್ಟು, ನಗರದ ಸೌಂದರ್ಯವನ್ನು ಹಾಳು ಮಾಡಿದ್ದಾರೆ ಜನಗಳ ಆರೋಗ್ಯ ದೃಷ್ಟಿಯಿಂದ ದೊಡ್ಡ ದೊಡ್ಡ ಉದ್ಯಾನವನಗಳನ್ನು ಹಾಗೇಯೇ ಉಳಿಸಿಕೊಂಡು ಹೋಗುವುದು ಕ್ಷೇಮಕರವಾದದ್ದು. ಬೇರೆ ಕಡೆ ಜಾಗ ನೋಡಿ ಈ ವೀರಸೌಧ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಲಿ ಎಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—ಯಾವರೀತಿ ಕಟ್ಟುತ್ತೀರಿ ಎನ್ನುವುದರ ಮೇಲೆ ಇದೆ. ಸೌಧ ಅಂದರೆ.....

ಶ್ರೀ ವೈ. ರಾಮಕೃಷ್ಣ.—ವೀರಸೌಧ.

ಶ್ರೀ ಪಿ. ರಾಂದೇವ್.—ನಿಮ್ಮ ಹತ್ತಿರ ಡಿಸೈನ್ ಇದೆಯೇ ?

ಶ್ರೀ ವೈ. ರಾಮಕೃಷ್ಣ.—ಇದರ ಬಗ್ಗೆ ಒಂದು ಸಮಿತಿ ನೇಮಕ ಮಾಡಿದ್ದೆವು ಸಮಿತಿಯವರು ಬೇಡ ಎಂದು ಹೇಳಿ ಶಿಫಾರಸ್ಸು ಮಾಡಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಪಾರ್ಕನಲ್ಲಿ ಯಾವ ಕಟ್ಟಡವನ್ನೂ ಕಟ್ಟುವುದು ಸರಿಯಲ್ಲ. ವೀರಸೌಧ ಕಟ್ಟಬೇಕೆಂದು ಗೊತ್ತುಮಾಡಿದ ಜಾಗ ನಮಗೆ ತಿಳಿದಂತೆ ಲಾಲ್‌ಬಾಗ್‌ನಲ್ಲಿರತಕ್ಕ ಬಂಡೆಯ ಮೇಲೆ. ಆದುದರಿಂದ ಪಾರ್ಕಿಗೆ ಯಾವರೀತಿಯ ತೊಂದರೆ ಆಗುವುದಿಲ್ಲ. ಮಾಸ್ಕ್ ಎಂತ್ರರಾದ ರಾಂದೇವರ್ ಅವರು ಹೇಳಿದಂತೆ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಬಂಡೆ ಕೂಡ ಲಾಲ್‌ಬಾಗ್ ಒಳಗಡೆ ಇದೆ. ಸಮಿತಿಯವರು ಎಲ್ಲಾ ವಿಷಯಗಳನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ, ವೆಚ್ಚವೂ ಕೂಡ ಜಾಸ್ತಿಯಾಗುತ್ತದೆಂದು ಕಟ್ಟುವುದು ಬೇಡ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. It is a part and parcel of Lalbaugh.

ಶ್ರೀ ಪಿ. ರಾಂದೇವ್.—ಕಮಿಟಿಯವರು ಏನು ಹೇಳಿದ್ದಾರೆಂದು ಓದುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ವೀರಸೌಧ ಬಿಡಬೇಕೆಂದು ಸರ್ಕಾರದ ಉದ್ದೇಶ ಇಲ್ಲ. ಆ ಸ್ಥಳದಲ್ಲಿ ಕಟ್ಟಬಾರದು ಅಂಥ ಅಭಿಪ್ರಾಯ. ಅದಕೋಸ್ಕರ ಇದನ್ನು ತೆಗೆದುಕೊಂಡು ಬಂದಿದ್ದೇವೆ, ಇದಕ್ಕೆ ಒಪ್ಪಿಗೆ ಕೊಡಬೇಕು.

ಶ್ರೀ ಪಿ. ರಾಂದೇವ್.—ಇದು ನ್ಯಾಯವಲ್ಲ ಅಂಥ ನನಗನಿಸುತ್ತೆದೆ. ವೀರಸೌಧ ಯಾವ ಒಬ್ಬ ವ್ಯಕ್ತಿ ಸ್ಮಾರಕ ಅಲ್ಲ.

ಶ್ರೀ ವೈ. ರಾಮಕೃಷ್ಣ.—ಸ್ಮಾರಕ ಅಲ್ಲ, ಸೌಧ.

ಶ್ರೀ ಪಿ. ರಾಂದೇವ್,—ಕಮಿಟಿಯವರು ಏನು ಕೊಟ್ಟಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಆ ಸ್ಥಳದಲ್ಲಿ ಬೇಡ ಅಂಥ ಹೇಳಿದ್ದಾರೆ.

ಶ್ರೀ ಪಿ. ರಾಂದೇವ್.—ಅವರ ಕಲ್ಪನೆ ಏನಿತ್ತು, ಸೌಧ ಹೇಗೆ ಇರಬೇಕೆಂದು ಹೇಳಿದ್ದಾರೆ, ಎಷ್ಟು ಸ್ಕ್ವೇರ್ ಬಿಲ್ಡಿಂಗ್ ಕಟ್ಟಬೇಕೆಂದು ಹೇಳಿದ್ದಾರೆ. ಆ ಕಮಿಟಿಯ ರೆಕಮಂಡೇಷನ್ ಏನು ? ಆಲ್ಟರ್‌ನೇಟ್ ಸೈಟ್ ಏನಾದರೂ ಪ್ರಪೋಸ್ ಮಾಡಿದ್ದೀರಾ ?

ಶ್ರೀ ಹೆಚ್. ಗಂಗಾಧರನ್.—ಹಿಂದೆ ಹನುಮಂತಯ್ಯನವರು ಇದ್ದ ಕಾಲದಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ವಿಧಾನಸೌಧದಷ್ಟೇ ಮಹತ್ವವಾದಂಥ ಕಟ್ಟಡ ವೀರಸೌಧ ಆಗಬೇಕೆಂದು ಹೇಳಿದ್ದರು.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇದರಲ್ಲಿ ಅಷ್ಟು ಮಹತ್ತರವಾದ ಬದಲಾವಣೆ ಇಲ್ಲ ಎಂದು ಹೇಳಿದರು, ಅಂದಮೇಲೆ ಮಹತ್ತ ಬದಲಾವಣೆ ಇದೆ ಅಂಥ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದರಲ್ಲಿ ವಿಶೇಷ ಏನಿದೆ ಎಂದರೆ ಬೇರೆ ಕಡೆ ಕಟ್ಟಬೇಕು ಇಲ್ಲಿ ಬೇಡ ಅಂಥ ಹೇಳುತ್ತಿದ್ದರೆ. ಬೇರೆ ಕಡೆ ಎಲ್ಲಿ ಕಟ್ಟುತ್ತಾರೆ. ಜಾಗ ಎಲ್ಲಿದೆ ಎನ್ನುವುದನ್ನು ತಿಳಿಸದೆ ತಿಲಾಂಜಲಿ ಬಿಟ್ಟ ಹಾಗೆ ಒಂದೇ ಮಾತಿನಲ್ಲಿ ಹೇಳುತ್ತಿದ್ದಾರೆ. ದಿವಂಗತ ಮಾನ್ಯ ಹನುಮಂತಯ್ಯನವರು ಯೋಚನೆ ಮಾಡಿದ್ದು ಮಹತ್ತರವಾದ ವಿಚಾರ ಅಂಥ ಒಪ್ಪಿಕೊಂಡರು ಕೂಡ ಇವರು ಅದರ ರೂಪ ರೇಖೆ ಇಲ್ಲದಂತೆ ಮಾಡಿದ್ದಾರೆ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಸ್ವಾತಂತ್ರಕ್ಕೆ ಹೋರಾಡಿದ ಜನಗಳಿಗೆ ಗೌರವಕೊಟ್ಟು, ರಾಷ್ಟ್ರಾದ್ಯಂತ ಬೆಲೆ ಕೊಟ್ಟು ಉಳಿಸಿಕೊಂಡು ಬಂದಿದ್ದಾರೆ. ರಷ್ಯಾದಲ್ಲಿ ರೆವಲ್ಯೂಷನ್ ಅಂಥ ಆದಮೇಲೆ ಅವರು ಏನೂ ಮಾಡಲಿಕ್ಕೆ ಆಗದೇ ಇದ್ದರೂ ಕೂಡ ಹೋರಾಟ ಮಾಡಿ ತಲೆಗಳನ್ನು ಕಡಿದಿದ್ದು ಯಾವಾಗ ತಲೆ ರಾಶಿಗಳು ಬಿದ್ದುಹೋದವೋ ಆ ಬೆಟ್ಟಕ್ಕೆ ತಲಕಾಯಿ ಬೆಟ್ಟ ಅಂಥ ಇಟ್ಟಿದ್ದಾರೆ. ಅಲ್ಲಿಗೆ ಹೋದವರು ಅದನ್ನು ನೋಡದೆ ಬಂದರೆ ರಷ್ಯಾ ವಿಸಿಟಿ ಅನ್ನುವುದು ಜೀರೋ ಅಂಥ ಹೇಳುತ್ತಾರೆ. ಮಾನವನ ಸ್ವಾತಂತ್ರಕ್ಕೆ ಹೋರಾಡಿದ್ದನ್ನು ನೆನಸಿಕೊಳ್ಳಬೇಕೆಂದು ಮಾಡಿದ್ದು ಮಹತ್ತರವಾದುದು. ಪೊನ್ನೆ ಪಂದ್ಯಾರ ಹತ್ತಿರ ಇಂತಹ ಒಂದು ಕಟ್ಟಡವನ್ನು ಕಟ್ಟಿದ್ದಾರೆ ಅದು ಸುಣ್ಣಕ್ಕಲ್ಲು ಗೂಡು ಇದ್ದಹಾಗೆ ಇದೆ. ಆದರೆ ಸೌಂದರ್ಯ ಸಾಲದು ಅದರಲ್ಲಿ ಏನು ಮಹತ್ವ ಇದೆಯೋ, ಯಾರ ಹೆಸರು ಬರುತ್ತದೆಯೋ ಏನೋ ? ನಾನು ಅದನ್ನು ಕೂಲಂಕುಷವಾಗಿ ಇನ್ನೂ

ಕೋಡಿಲ್ಲ. ಬೇಕು, ಬೇಡ ಎನ್ನುವುದಕ್ಕೆ ಮುಂಚೆ ಕಮಿಟಿಯವರು ಈ ಪಾರ್ಕ್‌ನಲ್ಲಿ ಬೇಡ ಅಂದರು ಅಂಥ ಹೇಳುತ್ತಿದ್ದಾರೆ. ಅದು ಬರೆಯುವ ರೀತಿ ಅದು (Government taking every aspect of the matter into consideration ಎನ್ನುವಾಗ ಒಂದು ಆ್ಯಸ್ಪೆಕ್ಟ್ ನೋಡಿರುವುದಿಲ್ಲ, ಒಂದೊಂದು ಸಲ ಬರೆಯುವ ರೀತಿ ಅದು.

ಶ್ರೀ ವೈ. ರಾಮಕೃಷ್ಣ.—ಅವರು ಮಂತ್ರಿಗಳಾಗಿದ್ದರು, ಅವರ ಅನುಭವ ಹೇಳುತ್ತಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಟೇಕಿಂಗ್ ಎನ್ನುವಾಗ ಒಂದೊ ಇಲ್ಲದೆ ಆ ಫಾರಮ್‌ನಲ್ಲಿ ಬರೆದಿರುತ್ತಾರೆ, ಅದು ಸಾಧ್ಯ.

ಶ್ರೀ ಸಿ. ಎ. ಚಂದ್ರೇಗೌಡ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೊದ್ದೂರು ಹತ್ತಿರ ಸುಣ್ಣಕಲ್ಲು ಗೂಡು ನೋಡಿದ್ದಾರೋ ಅಥವಾ ವೀರಸೌಧ ನೋಡಿದ್ದಾರೆ ನನಗೆ ಅರ್ಥವಾಗುತ್ತಿಲ್ಲ. ವೀರಸೌಧವನ್ನು ಸುಣ್ಣಕಲ್ಲು ಗೂಡಿಗೆ ಹೋಲಿಸುವುದು ಬಹಳ ವಿಷಾದ.

ಶ್ರೀ ಕೆ. ಪ್ರಭಾಕರ್.—ಅದು ನೋಡುವುದಕ್ಕೆ ಚಿಕ್ಕದಾಗಿ ಕಾಣುತ್ತದೆ. ಅದಕ್ಕಿಂತಲೂ ನೂರ ರಷ್ಟು ಚೆನ್ನಾಗಿ ಕಟ್ಟಬೇಕೆಂದಿರುವಾಗ ಇನ್ನೂ ಚೆನ್ನಾಗಿ ಕಟ್ಟಬೇಕಾಗುತ್ತದೆ. ಅಲ್ಲಿ ಚಿಕ್ಕದೂ ಕಟ್ಟಿದ್ದಾರೆ ಅದಕ್ಕೆ ಇರುವ ಗೌರವ ಅದಕ್ಕೆ ಇದೆ. ಚಿಕ್ಕದಾಗಿ ಕಟ್ಟಿದ್ದಾರೆ ಅಂದರೆ ಇಂಗ್ಲಿಷ್‌ನಲ್ಲಿ ಕಾಟೇಜ್ ಅಂದರೆ ಗುಡಿಸಲು ಅಂಥ ಕನ್ನಡಕ್ಕೆ ಟ್ರಾನ್ಸ್‌ಲೇಟ್ ಮಾಡಬಹುತ್ತಾರೆ, ಮೂರು ಜನ ಹಿಡಿಯುವುದಕ್ಕೂ ಕಾಟೇಜ್ ಅಂಥ ಹೇಳುತ್ತಾರೆ, ೩೦೦ ಜನ ಹಿಡಿಯುವುದಕ್ಕೂ ಕಾಟೇಜ್ ಅಂಥ ಹೇಳುತ್ತಾರೆ. It depends upon the way in which one look at things. ಅದಕ್ಕೆ ನನ್ನ ಪೂರ್ಣ ಗೌರವವಿದೆ. ಸೆಂಟ್ರಲ್ ಜೈಲ್ ಪಟ್ಟಿ ಬಿಟ್ಟು ಆಚೆಗೆ ಹಾಕಬೇಕು ಅಂಥ ಹೇಳಿದರೆ ಹೊರತು ಮಾಡರನೈಸ್ ಆಗಿ ಆ ಜೈಲು ಎಲ್ಲಿ ಕಟ್ಟಬೇಕು ಹೇಗೆ ಎನ್ನುವುದನ್ನು ಬಿಟ್ಟು ಬಿಟ್ಟು ಮಾತನಾಡಿರಂತೆ ಆಗುತ್ತದೆ. ಆ ಪಾರ್ಕ್‌ನಲ್ಲಿ ಬೇಡ ಎನ್ನುವುದನ್ನು ಒಂದು ದೃಷ್ಟಿಯಿಂದ ಒಪ್ಪಿಕೊಳ್ಳುವಾಗ. ಕಮಿಟಿಯವರು ಬೇಡ ಅಂದರೆ, ಲಾಲ್‌ಬಾಗ್‌ನಲ್ಲಿ ಎಷ್ಟು ಜಾಗ ಇದೆ ಅಷ್ಟು ಜಾಗ ಬೇರೆ ಕಡೆ ನೋಡಿದ್ದೀರಾ ? ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಜನಗಳ ಸ್ಮರಣೆಯನ್ನು ನಾವು ಗೌರವಯುತವಾಗಿ ಬೆಳಸಬೇಕು ಎನ್ನುವ ದೃಷ್ಟಿಯಿಂದ ಮಾಡಿದರೂ ಕಮಿಟಿಯವರು ಬೇಡ ಅಂದರು ಅಂತ ಹೇಳಿ ಬಿಗ್ ಜೀರೋ ಮಾಡಬೇಕೆಂದು ಮಾಡಿದರು ಅಂಥ ಅರ್ಥ ಮಾಡಬಾರದು. ಇನ್ನೊತ್ತು ತಾವು ಇದನ್ನು ಎಲ್ಲಿ ಕಟ್ಟುತ್ತೀರಾ ಬೆಂಗಳೂರಿನಿಂದ ಎಷ್ಟು ದೂರದಲ್ಲಿ ಜಾಗ ಇದೆ, ಹೇಗೆ ಕಟ್ಟುತ್ತೀರಾ ಎನ್ನುವುದನ್ನು ಹೇಳಿದರೆ ತಪ್ಪು ಉದ್ದೇಶವನ್ನು ಅರ್ಥಮಾಡಿಕೊಳ್ಳಬಹುದು. ಒಂದೊಂದೇ ಮೊಟಕು ಮಾಡಿಕೊಂಡು ಬಂದು ಅದು ಇಲ್ಲದ ಹಾಗೆ ಮಾಡಿಬಿಟ್ಟರು ಎನ್ನುವ ದೃಷ್ಟಿಯಿಂದ ಈ ರೀತಿ ಹೇಳುತ್ತಿದ್ದೇನೆ. ದೇಶಕ್ಕೆ ದುಡಿದಂಥ ನಾಯಕರು ಇದು ಮೊಟಕು ಆಗಲೇ ಬಾರದು ಅಂಥ ಹೇಳುವಾಗ, ತಾವು ಯಾವ ಉದ್ದೇಶದಿಂದ ಬೇಡ ಅಂಥ ಹೇಳಿದಿರಿ. ಸರ್ಕಾರದ ಉದ್ದೇಶ ಹೇಳದೇ ಇರುವುದರಿಂದ ನಿರಾಶೆಯಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ತಿಳಿಸಬೇಕು. ಸಮಯ ಬಂದಾಗ ಹೇಳುತ್ತೇವೆ, ನೀವು ಕೇಳಿ ಆಮೇಲೆ ಹೇಳುತ್ತೇನೆ ಎನ್ನುವ ಅಸೆಂಬ್ಲಿ ಮಾಮೂಲಿ ಪದಗಳ ಜೊತೆಯಲ್ಲಿ ನಮ್ಮ ಆಸೆಯನ್ನು ಮುಳುಗಿಸಬೇಡಿ. ನಮಗೆ ತೃಪ್ತಿಕರವಾದ ರಿಪ್ಲೈ ಕೊಟ್ಟು ನಾಳೆ ಬೇಕಾದರೆ ಪಾಸ್ ಮಾಡಿಕೊಳ್ಳಿ ಇವರು ಲಾಲ್‌ಬಾಗ್‌ನಲ್ಲಿ ಬೇಡ ಎಂದು ಹೇಳಿರುವುದಕ್ಕೆ ಒಂದು ವಿಚಾರ ಹೇಳಬೇಕಾಗುತ್ತದೆ, ಯಾರೋ ಒಬ್ಬ ಆಕೆ ವಿಷ ತೂಗಿ, ತನ್ನ ಸರ್ದಾರನಿಗೆ ವಿಷ ಹಾಕಿಬಿಟ್ಟು, ಒಂದಾನೊಂದು ಕಾಲದಲ್ಲಿ ತಾನು ಹೀಗೆ ಇದ್ದಳು ಅಂಥ ತೋರಿಸುತ್ತಿದೆ. ಅವಳಿಗೆ ಹಾಫ್ ನೇಕೆಡ್ ಮಾಡಿದ್ದಾರೆ, ವೀಲಿ ಬಣ್ಣ ಹಾಕಿದ್ದಾರೆ. ವಿಷ ತೂಗುತ್ತಿದ್ದಾಳೆ. ಇದು ಮಾನವನ ಸಂಸ್ಕೃತಿಗೆ ವಿರೋಧವಾದುದು ಅಂಥ ಪಾರ್ಕಿನ ಮುಂದೆ ತಂದಿಟ್ಟಿದ್ದರು ಅದನ್ನು ಲಾಲ್‌ಬಾಗ್‌ನಲ್ಲಿ ಇಟ್ಟರು. ಅಂತಾದ್ದು ಇಡುವಾಗ ಪಾರ್ಕ್ ಕೆಟ್ಟುಹೋಗುತ್ತಾ ಇರಲಿಲ್ಲವೇ ? ವೀರಸೌಧ ಬೇಡ ಅಂಥ ತಳ್ಳಿಹಾಕುವುದನ್ನು ನಾನು ಒಪ್ಪುವುದಿಲ್ಲ. ಜನರೇಪನ್ ಟು ಜನರೇಷನ್‌ಗೆ ಗೌರವ ಕೊಟ್ಟು ಬೆಳಸತಕ್ಕಂತಾದ್ದು ಆಗಬೇಕು. ಸರ್ಕಾರದ ಉದ್ದೇಶ ಘನತೆ lovely green ತರಹ ಇರಬೇಕು. ಆದ್ದರಿಂದ, ಇದರ ಬಗ್ಗೆ ಕೂಲಂಕುಷವಾಗಿ ವಿವರ ತಿಳಿಸಿ ನಾಳೆ ಪಾಸ್ ಮಾಡಿಕೊಡುತ್ತೇವೆ ಅಂಥ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಪ್ರತಿಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ).— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅಲ್ಲಿ ಕಟ್ಟಬಾರದು ಅಂಥ ಸಾರ್ವಜನಿಕರಿಂದ ಕೆಲವಾರು ರೆಪ್ರಸೆಂಟೇಷನ್ ಬಂದಿರುವುದರಿಂದ ಬದಲಾವಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದು ಅಲ್ಲದೆ, ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನಿಂದ ಆಗಲಿ, ತೋಟಗಾರಿಗೆ ಇಲಾಖೆಯಿಂದ ಆಗಲಿ, ಇವರುಗಳಿಂದ ಅಲ್ಲಿ ಕಟ್ಟಬಾರದು ಅಂಥ ಏನಾದರೂ ವಿಚಾರ ಬಂದಿದೆಯೇ? ಇವೊತ್ತು ಅಲ್ಲಿ ಸೌಧ ಕಟ್ಟಬಾರದೆಂದು ಸಾರ್ವಜನಿಕರ ಅಭಿಪ್ರಾಯದ ಮೇಲೆ ಬದಲಾವಣೆ ಮಾಡಿದ್ದರೆ, ನಾಳೆಯಿಂದ ಏನಾದರೂ ಆದೇ ಪ್ರದೇಶದಲ್ಲಿ ಒಂದು ಕಟ್ಟಡ ನಿರ್ಮಾಣ ಮಾಡಬೇಕೆಂದು ಸಾರ್ವಜನಿಕರ ಅಭಿಪ್ರಾಯ ಬಂದರೆ ಅದಕ್ಕೆ ಸರ್ಕಾರ ಒಪ್ಪಿಗೆ ಕೊಡುತ್ತಾರೆಯೇ ತಿಳಿಸಬೇಕು. ಮಾನ್ಯ ಮಂತ್ರಿಗಳಿಗೆ ಸಾರ್ವಜನಿಕರಿಂದ ಮಾತ್ರ ರೆಪ್ರಸೆಂಟೇಷನ್ ಬಂದಂಶೆ ಕಾಣುತ್ತದೆ. ಇದನ್ನು ನೋಡಿದರೆ ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನಿಂದ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಅವರ ಅಬ್ಜಕ್ಷನ್ ಏನೂ ಇಲ್ಲ ಎನ್ನುವುದು ಅರ್ಥವಾಗುತ್ತದೆ. ಅಲ್ಲಿ ಕಟ್ಟಬಾರದು ಅಂಥ ಯಾವ ಯಾವ ಕಾರಣಗಳಿಂದ ತಳ್ಳಿಹಾಕಿದ್ದೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಸರ್ಕಾರ ಯಾವ ಆಧಾರದ ಮೇಲೆ ತೀರ್ಮಾನ ತೆಗೆದುಕೊಂಡಿದ್ದೀರಾ ಅದನ್ನು ಸರಿಯಾಗಿ ತಿಳಿಸಿ ಅದು ಆದಮೇಲೆ ಇದನ್ನು ಬೇಕಾದರೆ ಮುಂದುವರಿಸಬಹುದು.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮಾನ್ಯ ಮಂತಿಗಳು ಇದನ್ನು ಇಷ್ಟೊಂದು ಹಗುರವಾಗಿ ತೆಗೆದುಕ್ಕೊಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ. ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಷನ್ಸ್ ಅಂಡ್ ರೀಸನ್ಸ್‌ನಲ್ಲಿ ೧೯೭೫ರಲ್ಲಿ ತಿದ್ದುಪಡಿ ಮಾಡಿದ್ದೀರಿ. ೧೯೭೫ ಹನುಮಂತಯ್ಯನವರು ಬದುಕಿದ್ದರು. ಆಗ ಸರ್ಕಾರಕ್ಕೆ ಅವರು ಮನವಿ ಮಾಡಿಕೊಂಡು ಪರ್‌ಮಿಷನ್ ಕೇಳಿದಾಗ ಲಾಲ್‌ಬಾಗಿನಲ್ಲಿ ವೀರಸೌಧ ಕಟ್ಟಲು ಒಪ್ಪಿದರು ಆದರೆ ಈಗ ಅನುಮತಿಯನ್ನು ರದ್ದು ಮಾಡಲು ಆಲೋಚಿಸಿದ್ದೀರಿ ಇದಕ್ಕೆ ಕಾರಣ ಸಮಿತಿಯ ವರದಿ ಎಂದು ಉಲ್ಲೇಖಿಸಿದ್ದಾರೆ. ಅವರು ಏನು ರಿಪೋರ್ಟ್ ಕೊಟ್ಟಿದ್ದಾರೆ, ಆ ಕಮಿಟಿಯ ಸದಸ್ಯರುಗಳು ಯಾರು, ಸಾರ್ವಜನಿಕರು ಇದನ್ನು ವಿರೋಧ ಮಾಡಿದರು ಎಂದು ಹೇಳಿದ್ದಾರೆ, ಆ ಸಾರ್ವಜನಿಕರು ಯಾರು? ಈ ಜಾಗದಲ್ಲಿ ಬೇಡ ಎಂದವರು ಹಾಕಿ ಆಂದರೆ ಬೇರೆ ಕಡೆ ಕಟ್ಟಲು ಪ್ರಪೋಸಲ್ ಕೊಟ್ಟಿದ್ದಾರೆಯೇ?

ವ್ಯಕ್ತಿ ಬದುಕಿರುವಾಗ ಗೌರವ ತೋರಿಸುವುದಕ್ಕಿಂತ ವ್ಯಕ್ತಿ ತೀರಿ ಹೋದ ಮೇಲೆ ಹೆಚ್ಚು ಗೌರವ ತೋರಿಸಬೇಕಾದ್ದು ನಮ್ಮ ಮತ್ತು ಸರ್ಕಾರದ ಕರ್ತವ್ಯ. ತಾವು ನಮಗೆ ಸಮಾಧಾನಕರವಾದ ಉತ್ತರ ಏನನ್ನು ಕೊಡಬೇಕು. ತಾವು ಸಾರ್ವಜನಿಕರಿಗೆ ಗೌರವ ಕೊಟ್ಟು ಸೆಂಟಿಮೆಂಟ್ಸ್‌ನ್ನು ಉಳಿಸಿಕೊಳ್ಳಬೇಕು. ಆ ಕಮಿಟಿಯವರು ಏನು ತಮ್ಮ ವರದಿಯನ್ನು ಕೊಟ್ಟಿದ್ದಾರೆ ಅದನ್ನು ಸಭೆಯ ಮುಂದಿಡಬೇಕು. ಆನಂತರ ತಾವು ಹೇಳಿರುವಂಥ ತಿದ್ದುಪಡಿಯನ್ನು ತೆಗೆದುಕೆಳ್ಳಬೇಕೆಂದು ನಾನಂ ಬಹಳ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಏಕಕ್ಕೆ ಹೇಳುತ್ತಿದ್ದೇನೆಂದರೆ ಬೆಂಗಳೂರು ನಗರ ಕಾರ್ಪೊರೇಷನ್ ನವರು ಒಂದು ಮಾಡಿದರು. ಯಾವುದೋ ಒಂದು ರಸ್ತೆಯ ಹೆಸರು ರಾಯಲ್ ರೋಡ್ ಅಂತ ಈಗ್ಗೆ ೨೫ ವರ್ಷಗಳ ಹಿಂದೆ ಇಟ್ಟಿದ್ದದ್ದು ಉಂಟು ಈಗ ಬಂದಿರುವವರಿಗೆ ಈ ರಾಯಲ್ ಯಾರು ಅಂತ ಗೊತ್ತಿರುವುದಿಲ್ಲ. ಆದ್ದರಿಂದ ಅದು ಬೇಡವೆಂದು ಕಿತ್ತುಹಾಕಿ ಬೇರೆ ಯಾವುದೋ ಹೆಸರನ್ನು ಇಟ್ಟುಬಿಡುತ್ತಾರೆ. ಅದು ಹೇಗೆ ತಪ್ಪಾಗುತ್ತದೋ, ಇದೂ ಕೂಡ ಆದೇ ರೀತಿಯ ತಪ್ಪಾಗುತ್ತದೆ. ಯಾವ ವ್ಯಕ್ತಿಯೇ ಆಗಲಿ ಅವರು ಬದುಕಿದ್ದಾಗ ಹಾಕಿ ಅವರು ತೀರಿಹೋದಕೂಡಲೇ ಅವರು ಬೇಡವೆಂದು ಕಿತ್ತುಹಾಕುವುದು ಬೇಡ. ಇವತ್ತು ತಾವು ತಿದ್ದುಪಡಿಯನ್ನು ತರಲಿಕ್ಕೆ ಯಾರು ಕಾರಣರು. ಯಾರು ಅದನ್ನು ಅಪ್ರೋಸ್ ಮಾಡಿದ್ದಾರೆ ಎನ್ನುವ ವಿಚಾರವನ್ನು ಸಭೆಯ ಮುಂದಿಡಬೇಕೆಂದು ತಮ್ಮನ್ನು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ (ಮಾನ್ಯ ಕಾನೂನು ಸಚಿವರು).— ಇದು ಸೆಂಟಿಮೆಂಟಲ್ ವಿಚಾರವಲ್ಲ. ವೀರಸೌಧ ಎಂದರೆ ಇದೊಂದು ದೊಡ್ಡ ಪ್ರಮಾಣದ ವಿಚಾರ. ಇಲ್ಲಿರತಕ್ಕ ಪ್ಲಾನು, ಎಸ್ಟಿಮೇಟ್, ಇವುಗಳನ್ನು ನೋಡಿದರೇ ಗೊತ್ತಾಗುತ್ತದೆ. ಲಾಲ್‌ಬಾಗ್‌ನೊಳಗೆ ೫೦ ಎಕರೆ ಜಾಗ ಇದಕ್ಕೆ ಬೇಕಾಗುತ್ತದೆ ಎಂದರೆ ಇದು ಸಾಧ್ಯವಾಗುತ್ತದೆಯೇ ಎಂಬುದನ್ನು ತಾವು ಯೋಚನೆ ಮಾಡಿನೋಡಬೇಕು. ಇಲ್ಲಿ ಒಂದು ಸಣ್ಣ ಪ್ಯಾರಾವನ್ನು ಓದುತ್ತೇನೆ. ಅದು ಈ ರೀತಿ ಇದೆ.

"The site of Veerasoudha covers the rock as well as the surrounding area. An area of 50 acres of land to the East and South East will be covered with gardens and fountains.

Veerasoudha will be built with an appropriate setting of loveliness and serenity. The surrounding areas will be provided with fountains after the Gardens in Verssailes in Paris."

ಪ್ಯಾರಿಸ್‌ನಲ್ಲಿ ಯಾವ ರೀತಿ ಇದೆಯೋ ಅದೇ ರೀತಿಯಲ್ಲಿ ಮಾಡಬೇಕಾದರೆ ೫೦ ಎಕರೆ ಜಾಗ ಬೇಕಾಗುತ್ತದೆ, ದೊಡ್ಡ ದೊಡ್ಡ ಪ್ರಮಾಣದಲ್ಲಿ ಪ್ಲಾನು, ಎಸ್ಟಿಮೇಟ್ ಎಲ್ಲಾ ಇದೆ. ಆದ್ದರಿಂದ ಆ ಸ್ಥಳದಲ್ಲಿ ಇದು ಸಾಧ್ಯವಾಗುವುದಿಲ್ಲ.

ಶ್ರೀ ಜೆ. ಹೆಚ್. ಪಟೀಲ್.— ವೀರಸೌಧವನ್ನು ಸರ್ಕಾರದವರು ಕಟ್ಟಿಸುತ್ತೀರಾ? ಹಿಂದೆ ದಿವಂಗತ ಹನುಮಂತಯ್ಯನವರು ಇದು ಸರ್ಕಾರದಿಂದ ಕಟ್ಟುವಂತಹದ್ದಲ್ಲ, ಸಾರ್ವಜನಿಕರ ವಂತಿಗೆಯಿಂದ ಸ್ವಾತಂತ್ರ್ಯ ಯೋಧರ ಸ್ಮಾರಕವಾಗಿ ಕಟ್ಟುವಂಥದ್ದು, ಎಂದು ಹೇಳಿದ್ದರು. ಅಂದರೆ ಸರ್ಕಾರದಿಂದ ಇದನ್ನು ಕಟ್ಟಿಸಬೇಕೆಂದು ಇರಲಿಲ್ಲ. ಆದರೆ ಈಗ ಇದನ್ನು ಸರ್ಕಾರದಿಂದಲೇ ಕಟ್ಟಿಸಬೇಕೆಂದು ತಾವು ಏನಾದರೂ ಯೋಚನೆ ಮಾಡಿದ್ದೀರಾ? ಮಾನ್ಯ ಹನುಮಂತಯ್ಯನವರಂ ಹೋದಮೇಲೆ ಅದಕ್ಕೆ ಬೇಕಾದಂಥ ಹಣವನ್ನು ಕೊಡುವವರು ಯಾರೂ ಇಲ್ಲ. ಅಲ್ಲದೆ ಅವರಷ್ಟು ಪ್ರಭಾವಶಾಲಿ ಜನರೂ ಕೂಡ ಯಾರೂ ಇಲ್ಲಿ ಇಲ್ಲ. ಆದರೆ ಅವರ ಬಗ್ಗೆ ಯಾವ ರೀತಿ ಗೌರವವನ್ನು ನಾವು ತೋರಿಸಬೇಕೋ ಆ ರೀತಿ ತೋರಿಸ ಬೇಕು. ಸರ್ಕಾರದವರು ವೀರಸೌಧವನ್ನು ಕಟ್ಟಿಸುವುದಾದರೆ' ಬೇರೆ ಕಡೆ ಜಾಗವನ್ನು ತೆಗೆದು ಕೊಂಡು ಇನ್ನೊಂದು ಲಾಲ್‌ಬಾಗನ್ನು ನಿರ್ಮಾಣ ಮಾಡುವುದಾದರೆ ಮಾಡಿ. ಇದರ ಬಗ್ಗೆ ನಾವು ಹೆಚ್ಚಿಗೆ ಹೊಡೆದಾಡುವುದರಲ್ಲಿ ಏನೂ ಪ್ರಯೋಜನವಿಲ್ಲ. ಅದಕ್ಕೆ ನನ್ನ ವಿರೋಧ ಏನೂಇಲ್ಲ.

ಶ್ರೀ ಪಿ. ರಾಮ್‌ದೇವ್.— ಸರ್ಕಾರದವರು ಹಣವನ್ನು ಕೊಡುವುದಾದರೆ ಕೊಡಬಹುದು. ಏಕೆಂದರೆ ಚೌಡಯ್ಯ ಮೆಮೋರಿಯಲ್ ಹಾಲ್‌ಗೆ ಸರ್ಕಾರದಿಂದ ಹಣವನ್ನು ಕೊಟ್ಟಿದ್ದೀರಿ. ಅದು ಖಾಸಗಿಯವರ ಜಾಗ. ಅವರಿಗೆ ಕೊಟ್ಟಂತೆಯೇ ಇದಕ್ಕೂ ಕೊಡಬಹುದು. ಅದರಲ್ಲಿ ತಪ್ಪೇನೂ ಇಲ್ಲ.

ಶ್ರೀ ವೈ. ರಾಮಕೃಷ್ಣ.— ಇಲ್ಲಿ ತಂದಿರತಕ್ಕ ತಿದ್ದುಪಡಿ ಏನೆಂದರೆ ಆ ಸ್ಥಳದಲ್ಲಿ ವೀರಸೌಧವನ್ನು ಕಟ್ಟುವುದಕ್ಕಾಗುವುದಿ ? ಅಂತ ಅಷ್ಟೇ. ಏಕೆಂದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ೫೦ ಎಕರೆ ಜಮೀನನ್ನು ಆ ಲಾಲ್‌ಬಾಗ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಬಿಲ್ಲನ್ನು ತಂದಿದ್ದೇವೆ. ಇದುಬಿಟ್ಟು ಬೇರೆ ಯಾವ ಉದ್ದೇಶವೂ ಇದರಲ್ಲಿ.ಇಲ್ಲ,

ಶ್ರೀ ಎಂ. ಚಂದ್ರಶೇಖರ್.— ಅಲ್ಲಿ ವೀರಸೌಧವನ್ನು ಕಟ್ಟುವ ಬಗ್ಗೆ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನಿಂದಾಗಲಿ, ಅಥವಾ ತೋಟಗಾರಿಕೆ ಇಲಾಖೆಯವರಿಂದಾಗಲಿ ಏನಾದರೂ ಅಬ್ಜಕ್ಷನ್ ತಮಗೆ ಬಂದಿದೆಯೇ?

ಶ್ರೀ ವೈ. ರಾಮಕೃಷ್ಣ.— ಅದಕ್ಕೆ ಉತ್ತರ ಇದೆ.

MR. SPEAKER.— Now I will put the consideration motion to the vote of the House. The question is :

"That the Karnataka Government Parks (preservation) (Amendment) Bill, 1982 be taken into consideration."

The motion was adopted

MR. SPEAKER.— Now I will take up clause by clause consideration.

CLAUSE BY CLAUSE CONSIDERATION

CLAUSE No.2

MR. SPEAKR —The question is :

"That Clause 2 do stand part of the Bill."

The motion was adopted Clause 2 was added to the Bill.

CLAUSE 1, ETC.

MR. SPEAKER.— The question is :

"That Clause 1, the Long Title, the Preamble and the Enacting Formula do stand part of the Bill."—

The motion was adopted Clause 1. the Long Title, the preamble and the Enacting Formula were added to the Bill

MOTION TO PASS

SRI Y. RAMAKRISHNA.—I move :

"That the Karnataka Government Parks (Preservation) (Amendment) Bill, 1982 be passed."

MR. SPEAKER.—The question is :

"That the Karnataka Government Parks (Preservation) (Amendment) Bill, 1982 be passed."

The Motion was adopted and the Bill was passed.

MR. SPEAKER.— Now the House stands adjourned to meet tomorrow at 1.00 p.m.

The House adjourned at five minutes past Six of the Clock to meet again at One of the Clock on Tuesday the 15th June 1982